ಮಾಗಡಿ ತಾಲ್ಲೂಕಿನಲ್ಲಿ ಶಿಕ್ಷಕರ ಸಂಖ್ಯೆ

೬೨೦. ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಪ್ರಾಥಮಿಕ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮಾಗಡಿ ತಾಲ್ಲೂಕು ಪ್ರಾಥಮಿಕ ಹಾಗೂ ಪ್ರಾಥಮಿಕ ಶಿಕ್ಷಕರುಗಳ ಸಂಖ್ಯೆ ಎಷ್ಟು ?

(ಆ) ಅವುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

(ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

(ಅ) ಪ್ರಾಥಮಿಕ ೭೦೨ ಪ್ರಾಥಮಿಕ ೬೫

(ಆ) ಪ್ರಾಥಮಿಕ ೧೫೨ ಪ್ರಾಥಮಿಕ ೯

(ಇ) ಶೀಘ್ರದಲ್ಲಿಯೇ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಎಣ್ಣೆ ಬೀಜಗಳ ಉತ್ಪಾದನೆಯನ್ನು ಹೆಚ್ಚಿಸುವ ಬ

೬೧೨ ಶ್ರೀ ಪಿ. ಜಿ ಆರ್. ಸಿಂಧ್ಯ (ಕನಕಪುರ).— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಎಣ್ಣೆ ಬೀಜಗಳ ಉತ್ಪಾದನೆ ಪ್ರತಿವರ್ಷ ಎಷ್ಟಾಗುತ್ತಿದೆ ?

ಆ) ಇದನ್ನು ಹೆಚ್ಚು ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್ ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಅಂದಾಜಿಸಲಾಗಿರುವ ಎಣ್ಣೆಕಾಳು ಉತ್ಪಾದನೆ ಈ ರೀತಿ ಇದೆ.

೧೯೮೨-೮೩	...	೧೪.೯೪ ಲಕ್ಷ ಟನ್
೧೯೮೩-೮೪	...	೧೪.೦೬ ಲಕ್ಷ ಟನ್
೧೯೮೪-೮೫	...	೧೫.೫೨ ಲಕ್ಷ ಟನ್ (ಅಂದಾಜು)

ಆ) ರಾಜ್ಯದಲ್ಲಿ ಎಣ್ಣೆಕಾಳು ಉತ್ಪಾದನೆ ಹೆಚ್ಚು ಮಾಡಲು ಕೈಗೊಂಡಿರುವ ಕ್ರಮಗಳು ಯಾವುದೆಂದರೆ :—

೧) ಆಧುನಿಕ ಬೇಸಾಯ ಕ್ರಮಗಳನ್ನು ಅಳವಡಿಸಿ ಅಧಿಕ ಉತ್ಪಾದನೆ ಪಡೆಯುವುದರಲ್ಲಿ ರೈತರಿಗೆ ಮಾಹಿತಿ ಹಾಗೂ ತರಬೇತಿ ಕೊಡುವುದು.

೨) ಪ್ರಾಯೋಶ್ರಯದಲ್ಲಿ ನೂತನ ಕೃಷಿ ಬೇಸಾಯ ಕ್ರಮಗಳನ್ನು ಅನುಸರಿಸಿ ಮೇಲ್ಮಣ್ಣಿನ ಸಂರಕ್ಷಣೆಯನ್ನು ಮತ್ತು ಭೂಮಿಯಲ್ಲಿ ತೇವಾಂಶ ಕಾಪಾಡುವುದರ ಮೂಲಕ ಮಣ್ಣಿನ ಫಲವತ್ತತೆ ಹೆಚ್ಚಿಸುವುದು.

೩) ಕೆರೆ, ಅಣೆಕಟ್ಟು ಹಾಗೂ ಅಚ್ಚುಕಟ್ಟು ಪ್ರದೇಶಗಳಲ್ಲಿ ಭತ್ತ ಬೆಳೆಯಲು ಸಾಕಷ್ಟು ನೀರು ಇಲ್ಲದಿದ್ದರೆ ಭತ್ತದ ಬದಲು ಎಣ್ಣೆಕಾಳುಗಳನ್ನು ಆರೆ ನೀರಾವರಿ ಬೆಳೆಯಾಗಿ ಬೆಳೆಯುವುದು.

೪) ಎಣ್ಣೆಕಾಳು ಬೆಳೆಯನ್ನು ಮಿಶ್ರ ಹಾಗೂ ಬಹು ಬೆಳೆಯಲಾಗಿ ಬೆಳೆಯುವುದು ಮತ್ತು ಬೆಳೆ ಪರಿವರ್ತನೆಯಲ್ಲಿ ಪರ್ಯಾಯ ಬೆಳೆಯಾಗಿ ಅಳವಡಿಸುವುದು.

೫) ಬತ್ತದ ಕೊಯಿಲಿನ ನಂತರ ಭೂಮಿಯಲ್ಲಿನ ಉಳಿಕೆ ತೇವಾಂಶದಲ್ಲಿ ನೆಲಗಡಲೆ ಬಿಳಿಸುವುದು.

೬) ಈ ದಿಶೆಯಲ್ಲಿ ರೈತರನ್ನು ಎಣ್ಣೆಕಾಳು ಬೆಳೆಯುವ ಬಗ್ಗೆ ಉತ್ತೇಜಿಸಲು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಎಣ್ಣೆಕಾಳು ಅಭಿವೃದ್ಧಿ ಯೋಜನೆ ಮತ್ತು ಎಣ್ಣೆಕಾಳು ಉತ್ಪಾದನೆ ಒತ್ತು ಯೋಜನೆಗಳಡಿಯಲ್ಲಿ ಅವರಿಗೆ ಅಧಿಕ ಇಳುವರಿ ಗುಣಮಟ್ಟದ ಬಿತ್ತನೆಬೀಜಗಳನ್ನು ಪರಿಂಗಡವಾಗಿ ಒದಗಿಸುವುದು. ಸಸ್ಯ ಸಂರಕ್ಷಣೆ ರಾಸಾಯನಿಕಗಳು ಮತ್ತು ಉಪಕರಣಗಳು, ಸುಧಾರಿತ ಕೃಷಿ ಸಲಕರಣೆಗಳು, ಪಿಪ್ಸ್‌ಗಳು, ತುಂತುರು ನೀರಾವರಿ ಯಂತ್ರಗಳು ಮುಂತಾದವುಗಳನ್ನು ರಿಯಾಯಿತಿ ದರದಲ್ಲಿ ಒದಗಿಸಿ ಕೊಡಲಾಗುತ್ತಿದೆ.